## ಸಾಂಸ್ಥಿಕ ಸ್ವರೂಪ

ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಂಧ್ರ ಪ್ರದೇಶ ಮತ್ತು ರಾಜಸ್ಥಾನ ಈ ಎರಡೂ ರಾಜ್ಯಗಳ ಸಾಂಸ್ಥಿಕ ಸ್ವರೂಪ ಹೆಚ್ಚು ಕಡಿಮೆ ಒಂದೇ ತೆರನಾಗಿದೆ. ನೀತಿ ಮಟ್ಟದ ಉಪಕ್ರಮ ಮತ್ತು ನಿರ್ಧಾರಗಳಿಗೆ ಚುನಾಯಿತ ಮಂತ್ರಿಗಳ ನೇತೃತ್ವದಡೆಯಿರುವ ಶಿಕ್ಷಣ ಸಚಿವಾಲಯಗಳ ಜವಾಬ್ದಾರಿಯಾಗಿರುತ್ತದೆ. ಆಡಳಿತಾತ್ಮಕ ಜವಾಬ್ದಾರಿಯನ್ನು ಹಿರಿಯ ಅಧಿಕಾರಿಯೊಬ್ಬರು ನಿರ್ವಹಿಸುತ್ತಾರೆ (ಇವರನ್ನು ಮುಖ್ಯ ಕಾರ್ಯದರ್ಶಿ ಅಥವ ಕಾರ್ಯದರ್ಶಿ ಎಂದು ಕರೆಯುತ್ತಾರೆ). ಇವರ ಸಹಾಯಕ್ಕೆ ಹೆಚ್ಚುವರಿ ಕಾರ್ಯದರ್ಶಿಗಳು, ಉಪಕಾರ್ಯದರ್ಶಿಗಳು ಮತ್ತು ಇತರ ಅಧಿಕಾರಿಗಳ ತಂಡ ಇರುತ್ತದೆ. ರಾಜ್ಯ ಕೇಂದ್ರದಿಂದ ಗ್ರಾಮ ಮಟ್ಟದವರೆಗೆ ವಿವಿಧ ಸ್ತರಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಸರ್ಕಾರಿ ಅಂಗ ಸಂಸ್ಥೆಗಳು ಸರ್ಕಾರದ ನೀತಿ ನಿಯಮಗಳನ್ನು ಜಾರಿಗೊಳಿಸುವ ಮತ್ತು ಶಾಲಾ ವ್ಯವಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿವೆ. ಇವುಗಳನ್ನು ವಿಶಾಲವಾಗಿ ಮೂರು ಇಲಾಖೆಗಳಾಗಿ (ಉಪವ್ಯವಸ್ಥೆಗಳಾಗಿ) ವಿಂಗಡಿಸಬಹುದು: ಆಡಳಿತ ಮತ್ತು ನಿಯಂತ್ರಕ, ಶೈಕ್ಷಣಿಕ, ಮತ್ತು ಕಾರ್ಯಕ್ರಮ ಸಂಬಂಧಿ ವ್ಯವಸ್ಥೆ, ರಾಜ್ಯ ಮಟ್ಟದಲ್ಲಿ, ಈ ಇಲಾಖೆಗಳ ಹೊಣೆಗಾರಿಕೆಯು DPEP (District Primary Education Programme - ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ) ಮತ್ತು SSA (Sarva Shiksha Abhiyan - ಸರ್ವ ಶಿಕ್ಷ ಅಭಿಯಾನ್) ಉದ್ದೇಶಕ್ಕೆಂದೇ ಸ್ಥಾಪಿತವಾದ ಶಿಕ್ಷಣ ನಿರ್ದೇಶನಾಲಯಗಳ, ರಾಜ್ಯ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳ ಹಾಗೂ ಶಿಕ್ಷಣ ಸಂಘಗಳದ್ದಾಗಿದೆ.

ಆಡಳಿತಾತ್ಮಕವಾಗಿ, ಭಾರತದಲ್ಲಿ ರಾಜ್ಯಗಳನ್ನು ಜಿಲ್ಲೆಗಳಾಗಿ ಮತ್ತು ಜಿಲ್ಲೆಗಳನ್ನು ಬ್ಲಾಕ್ ಗಳಾಗಿ ಅಥvAvವಾ ಮಂಡಲಗಳಾಗಿ ವಿಭಜಿಸಲಾಗಿದೆ (ಕೋಷ್ಟಕ 2.7 ನೋಡಿ). ಆಂಧ್ರ ಪ್ರದೇಶದಲ್ಲಿ ಒಂದು ಮಂಡಲದ ವ್ಯಾಪ್ತಿಯಲ್ಲಿ 25 ರಿಂದ 50 ಗ್ರಾಮಗಳಿದ್ದರೆ, ರಾಜಸ್ಥಾನದಲ್ಲಿ ಒಂದು ಬ್ಲಾಕ್ ನಲ್ಲಿ ಸುಮಾರು 200 ಗ್ರಾಮಗಳಿರುತ್ತವೆ. ಮೇಲಿನ ಪ್ಯಾರಾದಲ್ಲಿ ವಿವರಿಸಿದ ಮೂರೂ ಉಪ-ವ್ಯವಸ್ಥೆಗಳು ಜಿಲ್ಲಾ ಮಟ್ಟದಲ್ಲಿ ಕಛೇರಿ ಅಥವಾ ಸಂಸ್ಥೆಗಳನ್ನು ಹೊಂದಿರುತ್ತವೆ. ರಾಜಸ್ಥಾನದಲ್ಲಿ, ಬ್ಲಾಕ್ ಮಟ್ಟದಲ್ಲಿ ಕೂಡ ಆಡಳಿತ ಮತ್ತು ಕಾರ್ಯಕ್ರಮ ಸಂಬಂಧಿ ಕಛೇರಿಗಳಿವೆ. ಆದರೆ ಆಂಧ್ರ ಪ್ರದೇಶದಲ್ಲಿ ಇವುಗಳನ್ನು ಮಂಡಲ ಹಂತದಲ್ಲಿ ಒಂದು ಕಛೇರಿಯಾಗಿ ಒಗ್ಗೂಡಿಸಲಾಗಿದೆ. ಮೇಲೆ ಚರ್ಚಿಸಿದ ಆಡಳಿತ ವ್ಯವಸ್ಥೆಗೆ ಸಮಾನಾಂತರವಾಗಿ ಚುನಾಯಿತ ಸ್ಥಳೀಯ ಸರ್ಕಾರಗಳು, ಅಂದರೆ ಪಂಚಾಯತಿ ರಾಜ್ ಸಂಸ್ಥೆಗಳು (PRIs – ಪಿಆರ್ಐಎಸ್) ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತವೆ.

**ಕೋಷ್ಟಕ 2.7**

**ಆಂಧ್ರ ಪ್ರದೇಶ ಮತ್ತು ರಾಜಸ್ಥಾನದಲ್ಲಿರುವ ಆಡಳಿತ ಘಟಕಗಳು**

| | ಆಂಧ್ರ ಪ್ರದೇಶ | ರಾಜಸ್ಥಾನ |
|---|---|---|
| ಜಿಲ್ಲೆಗಳ ಸಂಖ್ಯೆ | 23 | 32 |
| ಮಂಡಲ/ ಬ್ಲಾಕ್ ಗಳ ಸಂಖ್ಯೆ | 1127 | 237 |
| ಗ್ರಾಮ ಪಂಚಾಯತಿಗಳ ಸಂಖ್ಯೆ | 21,176 | 9189 |
| ಹಳ್ಳಿಗಳ ಸಂಖ್ಯೆ | 28,123 | 41,352 |
| ವಸತಿ ಪ್ರದೇಶಗಳ ಸಂಖ್ಯೆ | 72,154 | 80,461 |
| ಪುರಸಭೆಗಳ ಸಂಖ್ಯೆ | 210 | 183 |

**ಮೂಲ: ಭಾರತ ಜನಗಣತಿ 2001**

## ರಾಜ್ಯಮಟ್ಟದ ಸಂಸ್ಥೆಗಳು

ಆಂಧ್ರ ಪ್ರದೇಶದಲ್ಲಿ ಹೆಚ್ಚಿನ ರಾಜ್ಯಮಟ್ಟದ ಸಂಸ್ಥೆಗಳು ರಾಜಧಾನಿಯಾದ ಹೈದರಾಬಾದಿನಲ್ಲಿಯೇ(ಈಗ ಹೈದರಾಬಾದ್ ಹೊಸ ರಾಜ್ಯವಾದ ತೆಲಂಗಾಣಕ್ಕೆ ಸೇರಿದೆ. ಈಗ ಆಂಧ್ರ ಪ್ರದೇಶದ ರಾಜಧಾನಿ ಅಮರಾವತಿ ಆಗಿದೆ) ಇವೆ. ಆದರೆ ರಾಜಸ್ಥಾನದಲ್ಲಿ ಅವುಗಳು ರಾಜ್ಯದ ಎಲ್ಲೆಡೆ, ಅಂದರೆ, ಸ್ವಾತಂತ್ರ್ಯಪೂರ್ವದಲ್ಲಿ ರಾಜ ಸಂಸ್ಥಾನಗಳ ರಾಜಧಾನಿಗಳಾಗಿದ್ದ ವಿವಿಧ ನಗರಗಳಲ್ಲಿ ಹರಡಿಕೊಂಡಿದೆ. 1949 ಮತ್ತು 1956ರಲ್ಲಿ ಕ್ರಮವಾಗಿ ರಾಜಸ್ಥಾನ ಮತ್ತು ಆಂಧ್ರ ಪ್ರದೇಶದಲ್ಲಿ ಸ್ಥಾಪನೆಗೊಂಡ ಶಿಕ್ಷಣ ನಿರ್ದೇಶನಾಲಯಗಳು ಶಿಕ್ಷಣ ವ್ಯವಸ್ಥೆಯ ಅತ್ಯಂತ ಹಳೆಯ ಇಲಾಖಾ ವ್ಯವಸ್ಥೆಗಳು. ಆಂಧ್ರ ಪ್ರದೇಶದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದೇ ಶಾಲಾ ಶಿಕ್ಷಣ ನಿರ್ದೇಶನಾಲಯ ಇದ್ದರೆ, ರಾಜಸ್ಥಾನದಲ್ಲಿ 1997ರಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು ಮತ್ತು ನಿರ್ದೇಶಕರ ಹುದ್ದೆಯನ್ನು ''ಆಯುಕ್ತ'' ದರ್ಜೆಗೆ ಏರಿಸಲಾಯಿತು.

ನಿರ್ದೇಶನಾಲಯಗಳು ಶಾಲೆಗಳ ಒಟ್ಟು ಆಡಳಿತಕ್ಕೆ ಜವಾಬ್ದಾರಿಯಾಗಿವೆ. ಶಿಕ್ಷಕರ ನೇಮಕ, ಸಿಬ್ಬಂದಿ ನಿರ್ವಹಣೆ; ಯೋಜನಾ ತಯಾರಿ, ಆಯವ್ಯಯ ಪಟ್ಟಿ ತಯಾರಿ, ಕ್ಷೇತ್ರ ಕಛೇರಿಗಳಿಗೆ ಹಣಕಾಸು ವಿಲೇವಾರಿ, ಆಡಿಟ್, ಇತ್ಯಾದಿ ಜವಾಬ್ದಾರಿಗಳು ಸೇರಿದಂತೆ ಶಾಲೆಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ; ಹೊಸ ಶಾಲೆಗಳನ್ನು ಸ್ಥಾಪಿಸುವುದು, ಉಚಿತ ಪುಸ್ತಕ ವಿತರಣೆ, ವಿದ್ಯಾರ್ಥಿ ವೇತನ ಹಂಚಿಕೆ, ಇತ್ಯಾದಿ ಸರ್ಕಾರಿ ಯೋಜನೆಗಳನ್ನು ಜಾರಿಗೊಳಿಸುವ ಮತ್ತು ಒಟ್ಟಿನಲ್ಲಿ ಶಿಕ್ಷಣದ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿರ್ವಹಿಸುವುದು ನಿರ್ದೇಶನಾಲಯಗಳ ಜವಾಬ್ದಾರಿಯಾಗಿರುತ್ತದೆ. ಆಂಧ್ರ ಪ್ರದೇಶದಲ್ಲಿ ಶಾಲಾ ಶಿಕ್ಷಣ ನಿರ್ದೇಶನಾಲಯದ ಮುಖ್ಯಸ್ಥರಾಗಿ ನಿರ್ದೇಶಕರಿದ್ದರೆ, ರಾಜಸ್ಥಾನದಲ್ಲಿ ಆ ಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣ ಆಯುಕ್ತರು ಇರುತ್ತಾರೆ. ಈ ಎರಡೂ ನಿರ್ದೇಶನಾಲಯಗಳ ಮೂಲ ಘಟಕವನ್ನು "ವಿಭಾಗ" ಎಂದು ಕರೆಯಲಾಗುತ್ತದೆ. ಅಂದರೆ ಒಂದು ಸಣ್ಣ ವಿಭಾಗವು ಒಂದು ಅಥವಾ ಎರಡು ಯೋಜನೆ ಅಥವಾ ಕ್ಷೇತ್ರಗಳ, ಉದಾಹರಣೆಗೆ, ಇಲಾಖೀಯ ವಿಚಾರಣೆ ಮತ್ತು ಶಿಕ್ಷಕರ ನೇಮಕಾತಿಯಂತಹ ವಿಷಯಗಳಿಗೆ ಸಂಬಂಧ ಪಟ್ಟ ಕೆಲಸಗಳನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ. ಆಂಧ್ರ ಪ್ರದೇಶಲ್ಲಿ ಈ ವಿಭಾಗಗಳನ್ನು ಉಪನಿರ್ದೇಶಕರು ನೋಡಿಕೊಂಡರೆ, ರಾಜಸ್ಥಾನದಲ್ಲಿ ಅವುಗಳನ್ನು ವಿಭಾಗಾಧಿಕಾರಿಗಳು ನೋಡಿಕೊಳ್ಳುತ್ತಾರೆ ಮತ್ತು ಇವರಿಗೆ ಸಹಾಯಕರಾಗಿ ಗುಮಾಸ್ತರು ಮತ್ತು ಸಚಿವಾಲಯದ ಸಿಬ್ಬಂದಿಗಳು ಇರುತ್ತಾರೆ. ಈ ಸಹಾಯಕರ ಕೆಲಸಗಳ ಮೇಲ್ವಿಚಾರಣೆಯನ್ನು ಎರಡು ಹಂತದಲ್ಲಿ ಉಪನಿರ್ದೇಶಕರು, ಜಂಟಿ ನಿರ್ದೇಶಕರು ಮತ್ತು ಹೆಚ್ಚುವರಿ ನಿರ್ದೇಶಕರಂತಹ ಅಧಿಕಾರಿಗಳು ಮಾಡುತ್ತಾರೆ. ಇವರು ನಿರ್ದೇಶಕರು ಅಥವಾ ಆಯುಕ್ತರಿಗೆ ಉತ್ತರದಾಯಿಗಳಾಗಿರುತ್ತಾರೆ. ಕಟ್ಟಡ ಮತ್ತು ಮೂಲಸೌಕರ್ಯಗಳು ತೃಪ್ತಿದಾಯಕವಾಗಿವೆ (ಎಲ್ಲಾ ಸಂಸ್ಥೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಅನುಬಂಧ A ನೋಡಿ).

ಆಂಧ್ರ ಪ್ರದೇಶದಲ್ಲಿ 1967ನೇ ಇಸವಿಯಲ್ಲಿ ಸ್ಥಾಪಿಸಿದ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (SCERT- ಎಸ್ಸಿಇಆರ್ಟಿ) ಮತ್ತು ರಾಜಸ್ಥಾನದ ಉದಯಪುರದಲ್ಲಿ 1978ನೇ ಇಸವಿಯಲ್ಲಿ ಸ್ಥಾಪಿಸಿದ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (SIERT- ಎಸ್ಐಇಆರ್ಟಿ) ಇಲಾಖೆಯ ಶೈಕ್ಷಣಿಕ ಶಾಖೆಗಳಾಗಿ ಕಾರ್ಯನಿರ್ವಹಿಸುತ್ತವೆ. ಈ ಸಂಸ್ಥೆಗಳು ಪಠ್ಯಕ್ರಮ ರಚಿಸುವ, ಪಠ್ಯಪುಸ್ತಕಗಳ ತಯಾರಿಯಲ್ಲಿ, ಶಿಕ್ಷಕರ ತರಬೇತಿ ಮತ್ತು ಇನ್ನಿತರ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿವೆ. ಆಂಧ್ರ ಪ್ರದೇಶದ SCERTಯಲ್ಲಿ

14 ಇಲಾಖೆಗಳಿವೆ: ಪ್ರಾಥಮಿಕ ಶಿಕ್ಷಣ, ಪೂರ್ವ ಬಾಲ್ಯದ ಶಿಕ್ಷಣ (ECC-ಇಸಿಸಿ) ಮತ್ತು ಸಂಶೋಧನಾ ಅಧ್ಯಯನ, ಶಿಕ್ಷಕ ತರಬೇತಿ, ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ತಯಾರಿಸುವ, ಯೋಜನೆ ಮತ್ತು ಸಂಖ್ಯಾಶಾಸ್ತ್ರ, ಜನಸಂಖ್ಯಾ ಶಿಕ್ಷಣ, ವಿಜ್ಞಾನ ಶಿಕ್ಷಣ. ಗಣಿತ ಶಿಕ್ಷಣ, ಶೈಕ್ಷಣಿಕ ತಂತ್ರಜ್ಞಾನ, ವೃತ್ತಿಶಿಕ್ಷಣ ಮತ್ತು ಆದಿವಾಸಿ ಶಿಕ್ಷಣ, ಭಾಷಾ ಶಿಕ್ಷಣ, ಸಮಾಜ ವಿಜ್ಞಾನ, ನಾವೀನ್ಯಗಳು, ಸಂಶೋಧನಾ ಅಧ್ಯಯನಗಳು, ಕಂಪ್ಯೂಟರ್ ಶಿಕ್ಷಣ ಮತ್ತು ಮೌಲ್ಯಮಾಪನ. ಪ್ರತಿ ಇಲಾಖೆಗೆ ಪ್ರೊಫೆಸರ್ ಶ್ರೇಣಿಯ ಅಧ್ಯಾಪಕರೊಬ್ಬರು ಮುಖ್ಯಸ್ಥರಾಗಿದ್ದು, ಅವರು ಇಬ್ಬರು ಅಥವಾ ಮೂವರು ಉಪನ್ಯಾಸಕರೊಡನೆ ಜೊತೆಗೂಡಿ ಕಾರ್ಯ ನಿರ್ವಹಿಸುತ್ತಾರೆ. SCERTಯು ಒಂದು ಸ್ವಾಯತ್ತ ಸಂಸ್ಥೆಯು ಅಲ್ಲಾ ಮತ್ತದಕ್ಕೊಂದು ಸಲಹಾ ಸಮಿತಿಯೂ ಇಲ್ಲ. ಅನುಬಂಧ A ಅಲ್ಲಿ ತೋರಿಸಿದಂತೆ, ಕಟ್ಟಡ ಮತ್ತು ಮೂಲಸೌಕರ್ಯಗಳು ಬಹಳ ಅಸಮರ್ಪಕವಾಗಿವೆ.

ರಾಜಸ್ಥಾನದಲ್ಲಿರುವ SIERTಯಲ್ಲಿ ಒಂಬತ್ತು ವಿಭಾಗಗಳಿವೆ: ಮಾನವಿಕಾಧ್ಯಯನ ಮತ್ತು ಸಮಾಜ ವಿಜ್ಞಾನ, ವಿಜ್ಞಾನ ಮತ್ತು ಗಣಿತ, ಮನಃಶಾಸ್ತ್ರ ಮತ್ತು ವೃತ್ತಿಶಿಕ್ಷಣ, ಶಿಕ್ಷಕ ತರಬೇತಿ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ, ಶೈಕ್ಷಣಿಕ ಉತ್ಪಾದನೆ*, ಶೈಕ್ಷಣಿಕ ಸಂಶೋಧನೆ ಮತ್ತು ಸಂವಹನ, ಅನೌಪಚಾರಿಕ ಶಿಕ್ಷಣ ಮತ್ತು ಅವಕಾಶವಂಚಿತ ವರ್ಗಗಳು ಹಾಗೂ ಪಠ್ಯಕ್ರಮ ಮತ್ತು ಮೌಲ್ಯಮಾಪನ. ಪ್ರತಿ ಇಲಾಖೆಗೆ ಜಂಟಿ ನಿರ್ದೇಶಕರು ಅಥವಾ ಉಪ ನಿರ್ದೇಶಕರು ಮುಖ್ಯಸ್ಥರಾಗಿದ್ದು, ಅವರು ಉಪನ್ಯಾಸಕರ, ಸಂಶೋಧನಾ ಅಧಿಕಾರಿಗಳ ಮತ್ತು ಶಿಕ್ಷಕರ ಜೊತೆಗೂಡಿ ಕಾರ್ಯ ನಿರ್ವಹಿಸುತ್ತಾರೆ. SIERTಗೆ ಸಲಹಾ ಸಮಿತಿಯೊಂದಿದೆ. ಕಟ್ಟಡ ಮತ್ತು ಮೂಲಸೌಕರ್ಯಗಳು ಸಮರ್ಪಕವಾಗಿವೆ.

1990ರ ದಶಕದಲ್ಲಿ DPEP ಯ ಅಡಿಯಲ್ಲಿ 'ಕಾರ್ಯಕ್ರಮ ಅನುಷ್ಠಾನ ವ್ಯವಸ್ಥೆ'ಗಳು' ಎಂದು ಕರೆಯಬಹುದಾದ ಹೊಸ ಸಂಸ್ಥೆಗಳನ್ನು ಜಾರಿಗೆ ತರಲಾಯಿತು ಮತ್ತು ತದನಂತರ ಈ ಎರಡೂ ರಾಜ್ಯಗಳಲ್ಲಿ SSA ಕೂಡ ಜಾರಿಗೆ ತರಲಾಯಿತು. ಜೈಪುರದಲ್ಲಿರುವ ದಿ ರಾಜಸ್ಥಾನ್ ಕೌನ್ಸಿಲ್ ಫಾರ್ ಪ್ರೈಮೆರಿ ಎಡ್ಯುಕೇಶನ್ (ಆರ್ಸಿಪಿಇ) (The Rajasthan Council for Primary Education (RCPE)) ಮತ್ತು ಹೈದರಾಬಾದಿನಲ್ಲಿರುವ ಆಂಧ್ರ ಪ್ರದೇಶ ಶಾಲಾ ಶಿಕ್ಷಣ ಸಂಘ (ಎಪಿಎಸ್ಇಎಸ್) (Andhra Pradesh School Education Society (APSES)), ನೋಂದಾಯಿತ ಸಂಸ್ಥೆಗಳಾಗಿದ್ದು,[23] ಇವುಗಳಿಗೆ ನಿರ್ದೇಶನಾಲಯಗಳಿಗಿಂತ ಹೆಚ್ಚಿನ ಸ್ವಾಯತ್ತತೆ ಇದೆ. ಈ ಸಂಘ

ಸಂಸ್ಥೆಗಳಿಗೆ ವಿವಿಧ ಇತರ ಸಂಸ್ಥೆಗಳಿಂದ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. RCPEಗೆ ಉತ್ತಮ ಕಟ್ಟಡ ಇದ್ದು, RCPE ಮತ್ತು APSESಗಳಲ್ಲಿ ಮೂಲಸೌಕರ್ಯ ತೃಪ್ತಿದಾಯಕವಾಗಿದೆ.

APSESಗೆ ಒಂದು ಸಾಮಾನ್ಯ ಮಂಡಳಿ ಇದ್ದು ಅದಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ ಮತ್ತು ಶಾಲಾ ಶಿಕ್ಷಣ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ. ಅದರ ಕಾರ್ಯನಿರ್ವಾಹಕ ಸಮಿತಿಯ ಮುಖ್ಯಾಧಿಕಾರಿಗಳಾಗಿ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಇರುತ್ತಾರೆ ಮತ್ತು ರಾಜ್ಯ ಯೋಜನಾ ನಿರ್ದೇಶಕರು ಅದರ ನಿರ್ವಹಣಾ ಅಧಿಕಾರಿಗಳಾಗಿರುತ್ತಾರೆ. ಇದರಲ್ಲಿ ಒಟ್ಟು ಹದಿನೆಂಟು ಘಟಕಗಳು ಇವೆ: ಸಂಶೋಧನೆ ಮತ್ತು ಮೌಲ್ಯಮಾಪನ, ಪರ್ಯಾಯ ಶಿಕ್ಷಣ ನಾವೀನ್ಯಗಳು, ಹೆಣ್ಣುಮಕ್ಕಳ ಶಿಕ್ಷಣ ಮತ್ತು ಪ್ರಾಥಮಿಕ ಹಂತದಲ್ಲಿ ಬಾಲಕಿಯರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್ಪಿಇಜಿಇಎಲ್) (NPEGEL-National Programme for Education of Girls at Elementary Level), ಪೂರ್ವ ಬಾಲ್ಯದ ಶಿಕ್ಷಣ, ಸಾಮರ್ಥ್ಯ ವರ್ಧನೆ, ಕೇಂದ್ರಿತ ಕ್ಷೇತ್ರಗಳು/ಗುಂಪುಗಳು, ನಿರ್ವಹಣೆ(ಆಡಳಿತ), ಯೋಜನೆ ಮತ್ತು ನಿರ್ವಹಣೆ, ಸಮುದಾಯ ಸಂಘಟೀಕರಣ ಮತ್ತು ಭಾಗವಹಿಸುವಿಕೆ, ಶಿಕ್ಷಣ ಶಾಸ್ತ್ರ ಮತ್ತು ಶಾಲಾ ಅಭಿವೃದ್ಧಿ, ದೂರ ಶಿಕ್ಷಣ ಕಾರ್ಯಕ್ರಮ, ವಿಶೇಷ ಅಗತ್ಯವಿರುವ ಮಕ್ಕಳ ಶಿಕ್ಷಣ, ಮಾಧ್ಯಮ ಮತ್ತು ದಾಖಲೀಕರಣ, ನಿರ್ವಹಣೆಯ ಮಾಹಿತಿ ವ್ಯವಸ್ಥೆಗಳು, ಕಸ್ತೂರ್ಬಾ ಗಾಂಧಿ ಬಾಲಿಕಾ ವಿದ್ಯಾಲಯ, ನಾಗರಿಕ ಕಾರ್ಯಗಳು, ಆರ್ಥಿಕ ಮತ್ತು ಆಡಳಿತ ಕಛೇರಿ, ಮತ್ತು ಜನಶಾಲಾ ((APDPEP – Andhra Pradesh District Primary Education Programme) (ಎಪಿಡಿಪಿಇಪಿ - ಆಂಧ್ರ ಪ್ರದೇಶ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ) 2003)). ಈ ಘಟಕಗಳ ಮೇಲಾಧಿಕಾರಿಗಳಾಗಿ ಸಹ ನಿರ್ದೇಶಕರು ಮತ್ತು ಉಪನಿರ್ದೇಶಕರು ಇರುತ್ತಾರೆ. ಇವರು ಸಹಾಯಕ ನಿರ್ದೇಶಕರುಗಳ ತಂಡಗಳೊಂದಿಗೆ ಕೆಲಸ ನಿರ್ವಹಿಸುತ್ತಾರೆ. RCPEನಲ್ಲಿ ಆರು ಘಟಕಗಳಿವೆ: ಯೋಜನೆ, ಪ್ರಾಥಮಿಕ ಔಪಚಾರಿಕ ಶಿಕ್ಷಣ, SSA/ಸಂಶೋಧನೆ ಮತ್ತು ಮೇಲ್ವಿಚಾರಣೆ, ಸಮುದಾಯ ಸಂಘಟೀಕರಣ, ಹಿರಿಯ ತರಬೇತಿ ಸಂಯೋಜಕ ಮತ್ತು ಆಡಳಿತ. ಪ್ರತಿ ಘಟಕದ ಜವಾಬ್ದಾರಿ ಒಬ್ಬ ಉಪ ನಿರ್ದೇಶಕರದಾಗಿದ್ದು, ಇವರ ಸಹಾಯಕ್ಕೆಂದು ಒಬ್ಬರು ಅಥವಾ ಇಬ್ಬರು ಸಹಾಯಕ ನಿರ್ದೇಶಕರು ಇರುತ್ತಾರೆ.

ಈ ಮೂರು ಪ್ರಮುಖ ಸಂಸ್ಥೆಗಳ ಜೊತೆಗೆ, ಈ ಎರಡೂ ರಾಜ್ಯಗಳಲ್ಲಿ ಪುಸ್ತಕ ಮುದ್ರಣಕ್ಕೆಂದು ಪ್ರತ್ಯೇಕ ಸಂಸ್ಥೆಗಳಿವೆ. ಇಷ್ಟಲ್ಲದೆ, ಆಂಧ್ರ ಪ್ರದೇಶದಲ್ಲಿ, ಸರ್ಕಾರಿ ಪರೀಕ್ಷಾ ನಿರ್ದೇಶನಾಲಯ ಇದೆ. ಇದರ ಪ್ರಮುಖ ಜವಾಬ್ದಾರಿ ಮಾಧ್ಯಮಿಕ ಶಾಲಾ ಪರೀಕ್ಷೆಗಳನ್ನು ನಡೆಸುವುದು. ಅದರ ಜೊತೆಗೆ

ಅದು ಏಳನೇ ತರಗತಿಯ ಪರೀಕ್ಷೆಗಳನ್ನು ನಡೆಸುವ ಸ್ಪಷ್ಟ ಜವಾಬ್ದಾರಿಯನ್ನು ಕೂಡ ಹೊಂದಿದೆ. ಇಷ್ಟೇ ಅಲ್ಲದೆ ಪ್ರತಿಯೊಂದು ರಜ್ಯಾದಲ್ಲಿ ಕೆಲವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅಥವಾ ವಿಶೇಷ ರೀತಿಯ ಶಾಲೆಗಳನ್ನು ನಡೆಸಲು ಕೆಲವು ಇತರ ಸಂಸ್ಥೆಗಳಿವೆ. ಉದಾಹರಣೆಗೆ, ಆಂಧ್ರ ಪ್ರದೇಶದಲಿರುವ ವಸತಿ ಶಾಲೆಗಳ ಸಂಘಗಳು ಹಾಗೂ ರಾಜಸ್ಥಾನದಲ್ಲಿರುವ ಶಿಕ್ಷಾಕಾರ್ಮಿ ಮಂಡಳಿ ಮತ್ತು ರಾಜಸ್ಥಾನ ಮದ್ರಸಾ ಮಂಡಳಿ.

## ಜಿಲ್ಲಾ ಮಟ್ಟದ ಸಂಸ್ಥೆಗಳು

ಎರಡೂ ರಾಜ್ಯಗಳಲ್ಲಿ ಹಾಗೂ ಶಾಲಾ ಆಡಳಿತಕ್ಕೆ ಸಂಬಂಧಿಸಿದಂತೆ ಜಿಲ್ಲಾ ಶಿಕ್ಷಣ ಕಛೇರಿಗಳು ಪ್ರಮುಖ ಕೇಂದ್ರ ಬಿಂದುಗಳಾಗಿರುತ್ತವೆ. ರಾಜಸ್ಥಾನದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ[24] ಪ್ರತ್ಯೇಕ ಕಛೇರಿಗಳಿವೆ. ಆದರೆ ಆಂಧ್ರ ಪ್ರದೇಶದಲ್ಲಿ ಹತ್ತನೇ ತರಗತಿಯ ತನಕದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಂದೇ ಕಛೇರಿಯಿದೆ. ಅಂಧ್ರ ಪ್ರದೇಶದಲ್ಲಿರುವ ಜಿಲ್ಲಾ ಕಛೇರಿಯು 50 ವರ್ಷಗಳಷ್ಟು ಹಳೆಯದಾಗಿದ್ದರೆ, ರಾಜಸ್ಥಾನದಲ್ಲಿರುವ ಜಿಲ್ಲಾ ಕಛೇರಿಯನ್ನು 1991ರಲ್ಲಿ , ಪ್ರಾಥಮಿಕ ಶಾಲಾ ಶಿಕ್ಷಣ ನಿರ್ದೇಶನಾಲಯವನ್ನು ಮಾಧ್ಯಮಿಕ ಶಾಲಾ ಶಿಕ್ಷಣ ನಿರ್ದೇಶನಾಲಯದಿಂದ ಪ್ರತ್ಯೇಕಿಸಿದ ಸಂದರ್ಭದಲ್ಲಿ ಸ್ಥಾಪಿಸಲಾಯಿತು. ಆಂಧ್ರ ಪ್ರದೇಶದಲ್ಲಿರುವ ಸಂಯೋಜಿತ ಜಿಲ್ಲಾ ಕಛೇರಿಯು ರಾಜಸ್ಥಾನದ ಪ್ರಾಥಮಿಕ ಶಿಕ್ಷಣದ ಜಿಲ್ಲಾ ಕಛೇರಿಯ ಸಿಬ್ಬಂದಿ ಮತ್ತು ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ಸುಸಜ್ಜಿತವಾಗಿದೆ. ಆಂಧ್ರ ಪ್ರದೇಶ ಕಛೇರಿಯಲ್ಲಿ ಒಬ್ಬ ಜಿಲ್ಲಾ ಶಿಕ್ಷಣ ಅಧಿಕಾರಿ (ಡಿಇಓ), ಐದು ಉಪ ಜಿಲ್ಲಾ ಶಿಕ್ಷಣ ಅಧಿಕಾರಿಗಳ ಮತ್ತು ಲೆಕ್ಕ ಪತ್ರ ನೋಡಿಕೊಳ್ಳಲು ಇನ್ನು ಕೆಲವು ಇತರ ಅಧಿಕಾರಿಗಳು ಇದ್ದಾರೆ. ರಾಜಸ್ಥಾನ ಜಿಲ್ಲಾ ಕಛೇರಿಯಲ್ಲಿ ಒಬ್ಬ ಜಿಲ್ಲಾ ಶಿಕ್ಷಣ ಅಧಿಕಾರಿ, ಒಬ್ಬ ಸಹಾಯಕ ಜಿಲ್ಲಾ ಶಿಕ್ಷಣ ಅಧಿಕಾರಿ ಹಾಗೂ ಇನ್ನೊಬ್ಬ ಕಿರಿಯ ಅಧಿಕಾರಿ ಮತ್ತು ಸಹಾಯಕ ಸಿಬ್ಬಂದಿಗಳು ಇರುತ್ತಾರೆ. ಜಿಲ್ಲಾ ಕಛೇರಿಗಳು ಮಧ್ಯಂತರ ಕಛೇರಿಗಳ ಮೂಲಕ ಕೇಂದ್ರ ನಿರ್ದೇಶನಾಲಯಗಳೊಂದಿಗೆ ಸಂಪರ್ಕ ಹೊಂದಿವೆ. ರಾಜಸ್ಥಾನದಲ್ಲಿ ಆರು ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಇವುಗಳ ಮುಖ್ಯಸ್ಥರಾಗಿ ಒಬ್ಬ ಶಿಕ್ಷಣ ಉಪ ನಿರ್ದೇಶಕರು ಇದ್ದರೆ ಆಂಧ್ರ ಪ್ರದೇಶದಲ್ಲಿ ಇದರ ಮುಖ್ಯಸ್ಥರಾಗಿ ಒಬ್ಬ ಪ್ರಾದೇಶಿಕ ಶಿಕ್ಷಣ ಉಪ ನಿರ್ದೇಶಕರು ಇರುತ್ತಾರೆ (APSES 2005-06).

ಶೈಕ್ಷಣಿಕ ಉಪ-ವ್ಯವಸ್ಥೆಯಲ್ಲಿ, ಜಿಲ್ಲಾ ಹಂತದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಯಟ್ಗಳು) (District Institutes of Education and Training- DIETs) ಇವೆ. ಇವುಗಳು

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸೇವಾ ಪೂರ್ವ ತರಬೇತಿಯನ್ನು ಒದಗಿಸುವುದಲ್ಲದೆ ಎರಡೂ ರಾಜ್ಯಗಳಲ್ಲಿ ಸೇವಾವಧಿ ತರಬೇತಿ ಮತ್ತು ಕ್ರಿಯಾ-ಸಂಶೋಧನೆ ಅಂತಹ ಇತರ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಜವಾಬ್ದಾರಿಯನ್ನೂ ಹೊಂದಿವೆ. ಆಂಧ್ರ ಪ್ರದೇಶದಲ್ಲಿ 1987 ಮತ್ತು 1990 ರ ನಡುವೆ, 23 ಶಿಕ್ಷಕ ತರಬೇತಿ ಸಂಸ್ಥೆಗಳನ್ನು DIETಗಳ ಸ್ಥಾನಮಾನಕ್ಕೆ ಏರಿಸಲಾಯಿತು ಮತ್ತು ಒಂದು ಆದಿವಾಸಿ ಶಿಕ್ಷಕ ತರಬೇತಿ ಸಂಸ್ಥೆಯನ್ನು sub-DIET (ಉಪ - ಡಯೆಟ್) (GoAP (ಆಂಧ್ರ ಪ್ರದೇಶ ಸರ್ಕಾರ) 2004) ಸ್ಥಾನಕ್ಕೆ ಏರಿಸಲಾಯಿತು. ರಾಜಸ್ಥಾನದಲ್ಲಿ 30 DIETಗಳನ್ನು ಸ್ಥಾಪಿಸಲಾಗಿದೆ. ಆಂಧ್ರ ಪ್ರದೇಶದಲ್ಲಿ DIETಗೆ ಒಬ್ಬ ಪ್ರಾಂಶುಪಾಲರು, ಏಳು ಹಿರಿಯ ದರ್ಜೆಯ ಉಪನ್ಯಾಸಕರು ಮತ್ತು ಹದಿನಾಲ್ಕು ಉಪನ್ಯಾಸಕರ ಹುದ್ದೆಗಳು ಮಂಜೂರಾಗಿವೆ. ರಾಜಸ್ಥಾನದಲ್ಲಿ ಮಂಜೂರಾದ ಶಿಕ್ಷಕ ಹುದ್ದೆಗಳ ಸ್ಥಾನ ಇದರ ಅರ್ಧದಷ್ಟು.

ಇದರ ಜೊತೆಗೆ ಜಿಲ್ಲಾ ಯೋಜನಾ ಕಛೇರಿಗಳು ಕೂಡ ಇವೆ. ಎರಡೂ ರಾಜ್ಯಗಳಲ್ಲಿ DEO ಅವರನ್ನು ಜಿಲ್ಲಾ ಯೋಜನಾ ಸಂಯೋಜಕರಾಗಿ ನೇಮಿಸಲಾಗಿದೆ. ಆದರೆ ಆಂಧ್ರ ಪ್ರದೇಶದಲ್ಲಿ ಯೋಜನಾ ಕಛೇರಿಯ ದಿನನಿತ್ಯದ ಕೆಲಸಗಳನ್ನು ಒಬ್ಬ ಸಹಾಯಕ ಯೋಜನಾ ಸಂಯೋಜಕರು (APC(ಎಪಿಸಿ)) ನಿರ್ವಹಿಸುವುದಾದರೆ, ರಾಜಸ್ಥಾನದಲ್ಲಿ ಒಬ್ಬ ಸಹಾಯಕ ಜಿಲ್ಲಾ ಯೋಜನಾ ಸಂಯೋಜಕರು (ADPC(ಎಡಿಪಿಸಿ)) ನಿರ್ವಹಿಸುತ್ತಾರೆ. ಆಂಧ್ರ ಪ್ರದೇಶದಲ್ಲಿ APCಗೆ ನಾಲ್ಕು ಜನ ಕಾರ್ಯಕ್ರಮ ಅಧಿಕಾರಿಗಳು ಸಹಾಯಕರಾಗಿ ಇರುತ್ತಾರೆ ಮತ್ತು ಇವರ ಜೊತೆಗೆ ತಾಂತ್ರಿಕ ಸಿಬ್ಬಂದಿ ಕೂಡ ಇರುತ್ತಾರೆ; ರಾಜಸ್ಥಾನದಲ್ಲಿ, APDCಗೆ ಶೈಕ್ಷಣಿಕ ಚಟುವಟಿಕೆಗಳಿಗೆ, ಸಮುದಾಯ ಸಂಘಟೀಕರಣಕ್ಕೆ, ಮತ್ತು ಮಹಿಳಾ ಅಭಿವೃದ್ಧಿಗೆಂದು ಮೂರು ಜನ ಕಾರ್ಯಕ್ರಮ ಅಧಿಕಾರಿಗಳು ಸಹಾಯಕರಾಗಿ ಇರುತ್ತಾರೆ.

## ಉಪ - ಜಿಲ್ಲಾ ಸಂಸ್ಥೆಗಳು

ಎರಡೂ ರಾಜ್ಯಗಳಲ್ಲಿ ರಾಜ್ಯ ಮತ್ತು ಜಿಲ್ಲಾ ಹಂತದ ಸಾಂಸ್ಥಿಕ ರಚನೆಗಳ ಸ್ವರೂಪ ಒಂದೇ ತೆರನಾಗಿದ್ದರೂ, ಅವುಗಳ ಉಪ-ಜಿಲ್ಲಾ ಸಾಂಸ್ಥಿಕ ಸ್ವರೂಪವು ವಿಭಿನ್ನವಾಗಿವೆ. ರಾಜಸ್ಥಾನವು ಭಾರತದ ಇತರ ರಾಜ್ಯಗಳಲ್ಲಿ ಪ್ರಚಲಿತವಿರುವ ಸ್ವರೂಪವನ್ನು ಅನುಸರಿಸುತ್ತದೆ. ಅಂದರೆ, ಬ್ಲಾಕ್ ಹಂತದಲ್ಲಿ ಒಂದು ಆಡಳಿತ ಕಛೇರಿ, ಬ್ಲಾಕ್ ಶಿಕ್ಷಣ ಕಛೇರಿಯು (Block Education Office), ಸ್ಥಾಪಿತವಾಗಿರುತ್ತದೆ. ಇಲ್ಲಿ ಒಬ್ಬ ಬ್ಲಾಕ್ ಶಿಕ್ಷಣ ಅಧಿಕಾರಿ (Block Education Officer - BEO)

ಮತ್ತು ಅವರಿಗೆ ಸಹಾಯಕವಾಗಿ ಮೂರು ಅಧಿಕಾರಿಗಳು ಹಾಗೂ ಕೆಲವು ಗುಮಾಸ್ತರು ಇರುತ್ತಾರೆ. ಅದಷ್ಟೇ ಅಲ್ಲದೆ ಒಬ್ಬರು ಬ್ಲಾಕ್ ಸಂಪನ್ಮೂಲ ಕೇಂದ್ರ ಸಂಯೋಜಕರು (Block Resource Centre Facilitator - BRCF) ಮತ್ತು ಇಬ್ಬರು ಸಂಪನ್ಮೂಲ ವ್ಯಕ್ತಿಗಳನ್ನು ಒಳಗೊಂಡಿರುವ ಮೂಲತಃ ಕಾರ್ಯಕ್ರಮ ರಚನೆಯ ವಿಸ್ತರಣೆಯಾಗಿರುವ ಒಂದು ಬ್ಲಾಕ್ ಸಂಪನ್ಮೂಲ ಕೇಂದ್ರವೂ ಸಹ ಇರುತ್ತದೆ. ಬ್ಲಾಕ್ ಹಂತದ ಕಛೇರಿಗಳಿಗೆ ಸಿಗುವ ಸಂಪನ್ಮೂಲಗಳು ಮಿತವಾಗಿರುತ್ತವೆ. ಪ್ರತಿ 12 ರಿಂದ 15 ಹಳ್ಳಿಗಳಿಗೆ ಒಬ್ಬ ಸಮುದಾಯ ಸಂಪನ್ಮೂಲ ಕೇಂದ್ರ ಸಂಯೋಜಕರ (Cluster Resource Centre Facilitator- CRCF) ಮೂಲಕ ಕಾರ್ಯಕ್ರಮದ ಸ್ವರೂಪವು ವಿಸ್ತಾರಗೊಳ್ಳುತ್ತದೆ.

ಆಂಧ್ರ ಪ್ರದೇಶದಲ್ಲಿ, ಶೈಕ್ಷಣಿಕ ಉಪ-ಜಿಲ್ಲಾ ವ್ಯವಸ್ಥೆಯು ಮಂಡಲ ಮಟ್ಟದಲ್ಲಿರುತ್ತದೆ. ಈ ಹಂತದಲ್ಲಿ ಆಡಳಿತಾತ್ಮಕ ಮತ್ತು ಯೋಜನಾ ಸಿಬ್ಬಂದಿ ಒಂದೇ ಕೇಂದ್ರದಲ್ಲಿರುತ್ತಾರೆ. ಮಂಡಲ ಕೇಂದ್ರದಲ್ಲಿ ಒಬ್ಬ ಮಂಡಲ ಶಿಕ್ಷಣ ಅಧಿಕಾರಿ (Mandal Education Officer – MEO) ಮತ್ತು ಮೂವರು ಮಂಡಲ ಸಂಪನ್ಮೂಲ ವ್ಯಕ್ತಿಗಳು (Mandal Resource Persons- MRPs) ಇರುತ್ತಾರೆ. ಇಲ್ಲಿ ಸಹಾಯಕ ಸಿಬ್ಬಂದಿಗಳ ಸಂಖ್ಯೆ ಬಹಳ ಕಡಿಮೆ. ಇದರ ಜೊತೆಗೆ 1987ರಲ್ಲಿ, ಆಂಧ್ರ ಪ್ರದೇಶದಲ್ಲಿ, ಆಂಧ್ರ ಪ್ರದೇಶ ಪ್ರಾಥಮಿಕ ಶಿಕ್ಷಣ ಯೋಜನೆಯ (APPEP) (Rao (ರಾವ್) 1999) ಅಡಿಯಲ್ಲಿ 15ರಿಂದ 20 ಶಾಲೆಗಳಿಗೆ 'ಶಿಕ್ಷಕ ಕೇಂದ್ರಗಳನ್ನು' (Teacher Centres - TCs) ತೆರೆಯಲಾಯಿತು. ಇವುಗಳನ್ನು DPEP (1994) ಮತ್ತು SSA (2001) ಯೋಜನೆಯ ಅವಧಿಯಲ್ಲಿ ಕೂಡ ಮುಂದುವರಿಸಲಾಯಿತು. ಶಿಕ್ಷಕ ಕೇಂದ್ರದ ಪ್ರಮುಖ ಚಟುವಟಿಕೆಗಳು ಪಾಠದ ತಯಾರಿ, ಗುಂಪು ಚರ್ಚೆ, ಬೋಧನೋಪಕರಣಗಳ ಬಳಕೆ, ಇತ್ಯಾದಿ – ಇವೆಲ್ಲವನ್ನು ಒಳಗೊಂಡಿರುತ್ತದೆ. (Firdausi et.al. (ಫಿರ್ದೌಸಿ ಮತ್ತಿತರರು) 1999).[25]

## ಸ್ಥಳೀಯ ಚುನಾಯಿತ ಸಂಸ್ಥೆಗಳು ಮತ್ತು ಶಾಲಾ ಸಮಿತಿಗಳು

ಇಲಾಖೀಯ ವ್ಯವಸ್ಥೆಗಳ ಜೊತೆಗೆ, ಸರ್ಕಾರಗಳು ಅಥವಾ ಪಂಚಾಯತಿ ರಾಜ್ ಸಂಸ್ಥೆಗಳು (PRIs) ಕೂಡ ಶಾಲಾ ನಿರ್ವಹಣೆಯ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತವೆ. ಎರಡೂ ರಾಜ್ಯಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಳಿಯ ಸರ್ಕಾರಗಳು, ಅಂದರೆ ಜಿಲ್ಲಾ ಪರಿಷತ್ತಳು ಇರುತ್ತವೆ. ರಾಜಸ್ಥಾನದಲ್ಲಿ ಬ್ಲಾಕ್ ಮಟ್ಟದಲ್ಲಿ ಪಂಚಾಯತಿ ಸಮಿತಿಗಳಿದ್ದರೆ, ಆಂಧ್ರ ಪ್ರದೇಶದಲ್ಲಿ ಮಂಡಲ ಮಟ್ಟದಲ್ಲಿ ಮತ್ತು

ಒಂದು ಅಥವಾ ಎರಡು ಹಳ್ಳಿಗಳನ್ನು ಒಳಗೊಂಡಂತೆ ಗ್ರಾಮ ಪಂಚಾಯತಿಗಳು ಕಾರ್ಯ ನಿರ್ವಹಿಸುತ್ತವೆ. ರಾಜಸ್ಥಾನದಲ್ಲಿ, 1959ರಿಂದ ಗ್ರಾಮೀಣ ಪ್ರಾಥಮಿಕ ಶಾಲೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಜಿಲ್ಲ ಪರಿಷತ್ತುಗಳಿಗೆ ವಹಿಸಲಾಯಿತು ಮತ್ತು 1998ರಲ್ಲಿ ಹಿರಿಯ ಪ್ರಾಥಮಿಕ ಹಂತದವರೆಗಿನ ಎಲ್ಲಾ ಗ್ರಾಮೀಣ ಶಾಲೆಗಳ ನಿರ್ವಹಣೆಯ ಜವಾಬ್ದಾರಿಯನ್ನು ಪಂಚಾಯತುಗಳಿಗೆ ವಹಿಸಲಾಯಿತು. ಪ್ರಾಥಮಿಕ ಶಾಲಾ ಶಿಕ್ಷಣದ DEO ಅವರನ್ನು ಜಿಲ್ಲಾ ಪರಿಷತ್ತಿನ ಹೆಚ್ಚುವರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ (Additional Chief Executive Officer - CEO), ಮತ್ತು ಬ್ಲಾಕ್ ಪಂಚಾಯತಿಗೆ (GoR (ರಾಜಸ್ಥಾನ ಸರ್ಕಾರ)2003b) BEO ಅವರನ್ನು ಹೆಚ್ಚುವರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಿಸಲಾಯಿತು. ಆಂಧ್ರ ಪ್ರದೇಶದಲ್ಲಿ, 1961ರಲ್ಲಿ ದೊಡ್ಡ ಸಂಖ್ಯೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಜವಾಬ್ದಾರಿಯನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸಲಾಯಿತು. ಶಿಕ್ಷಣ ಇಲಾಖೆಯು ಶೈಕ್ಷಣಿಕ ಪರಿವೀಕ್ಷಣೆ ಮತ್ತು ಪರೀಕ್ಷೆಯ ಜವಾಬ್ದಾರಿಯನ್ನು ಮಾತ್ರ ತೆಗೆದುಕೊಂಡು ಶಾಲ ನಿರ್ವಹಣೆಯ ಜವಾಬ್ದಾರಿಯನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸಿತು (Kumar (ಕುಮಾರ) 1998).

ಪಂಚಾಯತಿ ರಾಜ್ ಸಂಸ್ಥೆಗಳ (PRIs) ಜೊತೆಗೆ, ಪ್ರಾಥಮಿಕ ಶಿಕ್ಷಣದ ನಿರ್ವಹಣೆಗೆಂದೇ ಇತರ ಸಮುದಾಯ ಅಧಾರಿತ ಸಂಘಟನೆಗಳನ್ನು ಸ್ಥಾಪಿಸಲಾಗಿದೆ. ರಾಜಸ್ಥಾನದಲ್ಲಿ, DPEP ಯ ಅಡಿಯಲ್ಲಿ, ಪ್ರಚಲಿತದಲ್ಲಿದ್ದ ಗ್ರಾಮ ಶಿಕ್ಷಣ ಸಮಿತಿಗಳ ಬದಲಿಗೆ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (School Development and Monitoring Committees- SDMC) ಗಳನ್ನು ಸ್ಥಾಪಿಸಲಾಯಿತು. ಆರಂಭದಲ್ಲಿ, ಗ್ರಾಮ ಪಂಚಾಯತಿಯ ವಾರ್ಡ್ ಸದಸ್ಯರೊಬ್ಬರು SDMCಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆದರೆ 2002 ರಲ್ಲಿ SDMCಯ ಸ್ವರೂಪವನ್ನು ಬದಲಿಸಲಾಯಿತು ಮತ್ತು ಶಾಲಾ ಮುಖ್ಯೋಪಧ್ಯಾಯರನ್ನು ಅಧ್ಯಕ್ಷರನ್ನಾಗಿ ಹಾಗೂ ಒಬ್ಬ ಶಿಕ್ಷಕರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು. ವಿವಿಧ ಸಾಮಾಜಿಕ ವರ್ಗಗಳಿಂದ ಬಂದಿರುವ ಮೂರು ಪಾಲಕರು, ಮೂರು ಚುನಾಯಿತ ಪ್ರತಿನಿಧಿಗಳು, ಒಬ್ಬ ಉತ್ತಮ ವಿದ್ಯಾರ್ಥಿ, ಒಬ್ಬ ಬಾಮಾಶಾ (ಶಾಲೆಗೆ ಧನಸಹಾಯ ಮಾಡುವ ವ್ಯಕ್ತಿ), ಶಿಕ್ಷಣ ಇಲಾಖೆಯಿಂದ ನಿವೃತ್ತಿ ಹೊಂದಿದ ಇಬ್ಬರು ವ್ಯಕ್ತಿಗಳು, ಶಾಲಾ ಶಿಕ್ಷಕ ವೃಂದಿಂದ ಒಬ್ಬ ಪ್ರತಿನಿಧಿ ಮತ್ತು ವಿವಿಧ ಪರ್ಯಾಯ ಶಾಲೆಗಳ ಪ್ರತಿನಿಧಿಯಾಗಿ ಒಬ್ಬ ವ್ಯಕ್ತಿಯನ್ನು ಸದಸ್ಯರಾಗಿ ಆಯ್ಕೆ ಮಾಡಲಾಯಿತು. SDMC ಜವಾಬ್ದಾರಿ

ಏನೆಂದರೆ, ಶಾಲಾ ದಾಖಲಾತಿ ಅಭಿಯಾನಗಳನ್ನು ನಡೆಸುವುದು, ಮಕ್ಕಳು ಶಾಲೆಗೆ ನಿತ್ಯ ಹಾಜರಾಗುವಂತೆ ಖಚಿತಪಡಿಸುವುದು, ಶಾಲಾ ಅಭಿವೃದ್ಧಿ ನಿಧಿಯನ್ನು ಸೃಷ್ಟಿಸುವುದು (ಇದರಲ್ಲಿ ವಿವಿಧ ಸರ್ಕಾರಿ ಯೋಜನೆಗಳಿಗಾಗಿ ಮಂಜೂರಾದ ಹಣ ಮತ್ತು ಸಮುದಾಯದಿಂದ ಸಂಗ್ರಹವಾದ ಹಣ ಸೇರಿರುತ್ತದೆ) (Bhargava and Sharma (ಭಾರ್ಗವ ಮತ್ತು ಶರ್ಮ) 2004; GoR(ರಾಜಸ್ಥಾನ ಸರ್ಕಾರ) 2003a). ಇಷ್ಟೇ ಅಲ್ಲದೆ ಪ್ರತಿ ಶಾಲೆಯಲ್ಲೂ ಒಂದು ಪಾಲಕ-ಶಿಕ್ಷಕ ಸಂಘ ಇದ್ದು (Parent-Teacher Association PTA) ಅದರಲ್ಲಿ ಎಲ್ಲಾ ಪಾಲಕರು ಪಾಲ್ಗೊಳ್ಳಬಹುದಾಗಿದೆ (GoR (ರಾಜಸ್ಥಾನ ಸರ್ಕಾರ) 2004-05).

ನಮ್ಮ ಕ್ಷೇತ್ರ ಸಂಶೋಧನೆಯು ನಡೆಯುತ್ತಿರಬೇಕಾದರೆ ಆಂಧ್ರ ಪ್ರದೇಶದಲ್ಲಿ ಶಿಕ್ಷಣ ವ್ಯವಸ್ಥೆಯ ಸಾಂಸ್ಥಿಕ ರಚನೆಯು ಶಾಲಾ ಶಿಕ್ಷಣ ಸಮಿತಿ (School Education Committee- SEC) (ಇದು ಆಂಧ್ರ ಪ್ರದೇಶ ಶಾಲಾ ಶಿಕ್ಷಣ ಸಮುದಾಯದ ಭಾಗವಹಿಸುವಿಕೆ ಕಾನೂನು, 1998 ಕ್ಕೆ ಬದ್ಧವಾಗಿದೆ) ಮತ್ತು ಪಾಲಕ - ಶಿಕ್ಷಕ ಸಂಘ (Parent-Teacher Association - PTA) (ಇದರಲ್ಲಿ ಶಾಲೆಯ ಎಲ್ಲ ಶಿಕ್ಷಕರು ಮತ್ತು ಶಾಲೆಯಲ್ಲಿ ಕಲಿಯುತ್ತಿರುವ ಎಲ್ಲ ಮಕ್ಕಳ ಪಾಲಕರು ಭಾಗಿಯಾಗಿರುತ್ತಾರೆ) ಸೇರಿ ಶಾಲಾ ಶಿಕ್ಷಣ ಸಮಿತಿಯ ಸಾಮಾನ್ಯ ಮಂಡಳಿಯಾಗಿ ರಚನೆಯಾಗಿತ್ತು. ಪಾಲಕರ ಪೈಕಿ ನಾಲ್ಕು ಮಂದಿಯನ್ನು - ಇದರಲ್ಲಿ ಕನಿಷ್ಟ ಇಬ್ಬರು ಮಹಿಳೆ ಮತ್ತು ಒಬ್ಬರು ಪರಿಶಿಷ್ಠ ಜಾತಿ/ವರ್ಗ/ ಹಿಂದುಳಿದ ವರ್ಗ/ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು - ಇವರನ್ನು ಶಿಕ್ಷಕ-ಪಾಲಕ ಸಂಘವು SECಗೆ ಆಯ್ಕೆ ಮಾಡಲಾಯಿತು. SECಗೆ ಎರಡು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತಿದ್ದು ಈ ಅಧ್ಯಯನ ಕೈಗೊಳ್ಳುವ ಕಾಲಕ್ಕಾಗಲೆ SECಯ ಮೂರು ಬ್ಯಾಚ್ಗಳು ಚುನಾಯಿತವಾಗಿದ್ದವು. ಆಂಧ್ರ ಪ್ರದೇಶದಲ್ಲಿ SECಯನ್ನು ಪಂಚಾಯತ ರಾಜ್ ಸಂಸ್ಥೆಗಳೊಂದಿಗೆ ಬೆಸೆಯುವ ಪ್ರಯತ್ನ ಮಾಡಲಾಗಿತ್ತು. ಪ್ರತಿ ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಸರಪಂಚರು ಅಧ್ಯಕ್ಷರಾಗಿ, ಪ್ರೌಢಶಾಲೆ/ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಧ್ಯಾಯರು ಸಮನ್ವಯಾಧಿಕಾರಿಯಾಗಿ, SECಯ ಇಬ್ಬರು ಸದಸ್ಯರು (SEC ಯ ಅಧ್ಯಕ್ಷ ಮತ್ತು ಒಬ್ಬ ಮಹಿಳೆ) ಮತ್ತು ಸ್ವಯಂ ಸೇವಾ ಸಂಸ್ಥೆಯ ಸದಸ್ಯರನ್ನೂ ಒಳಗೊಂಡಂತೆ ಪಂಚಾಯತ್ ಶಿಕ್ಷಣ ಸಮಿತಿಯನ್ನು ಸ್ಥಾಪಿಸಲಾಯಿತು. ರೂ. 50,000 ಅಥವಾ ಅದಕ್ಕಿಂತ ಹೆಚ್ಚಿನ ದೇಣಿಗೆ ಕೊಟ್ಟವರು ಜೀವಮಾನ ಸದಸ್ಯರಾಗಿದ್ದರು. ಇದೇ ರೀತಿ ಕೆಳಹಂತದ ಸಮಿತಿಯ ಸದಸ್ಯತ್ವದಿಂದ ಸದಸ್ಯರನ್ನು ಚುನಾಯಿಸಿ ಮಂಡಲ ಶಿಕ್ಷಣ ಸಮಿತಿ ಮತ್ತು ಜಿಲ್ಲಾ ಶಿಕ್ಷಣ ಸಮಿತಿಯನ್ನು ಸ್ಥಾಪಿಸಲಾಯಿತು.

## ಅಧ್ಯಯನದ ಬಗ್ಗೆ

ಸಾಮಾಜಿಕ -ಆರ್ಥಿಕ ಸನ್ನಿವೇಶ, ಶಿಕ್ಷಣದ ಸ್ಥಿತಿಗತಿ, ನೀತಿಗಳು ಮತ್ತು ಕಾರ್ಯಕ್ರಮಗಳು ಹಾಗೂ ಸಾಂಸ್ಥಿಕ ರಚನೆಗಳ ಕುರಿತಾಗಿನ ನಮ್ಮ ಮುಂದಿನ ವಿವರಣೆಗಳು ಈ ಎರಡು ರಾಜ್ಯಗಳಲ್ಲಿನ ಪ್ರಾಥಮಿಕ ಶಿಕ್ಷಣದ ಪ್ರಕ್ರಿಯೆ ಮತ್ತು ಅದರ ಗತಿಶೀಲತೆಯನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಹಿನ್ನೆಲೆಯ ಮಾಹಿತಿಯನ್ನು ಒದಗಿಸುತ್ತವೆ. ಸೆಪ್ಟೆಂಬರ್ 2005 ರಿಂದ ಮಾರ್ಚ್ 2006ರವರೆಗೆ ನಾವು ಕೈಗೊಂಡ ಕ್ಷೇತ್ರ ಅಧ್ಯಯನವು, ಪ್ರತಿ ರಾಜ್ಯದಲ್ಲಿ, ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇರುವ ಎಲ್ಲ ಪ್ರಮುಖ ಸಂಸ್ಥೆಗಳೂ ಸೇರಿದಂತೆ, ರಾಜ್ಯಮಟ್ಟದಲ್ಲಿನ ನಿರ್ದೇಶನಾಲಯ, SCERT/SIERT ಮತ್ತು ಕಾರ್ಯಕ್ರಮ ಕಛೇರಿಗಳು; ಜಿಲ್ಲಾಮಟ್ಟದಲ್ಲಿನ ಒಂದು ಜಿಲ್ಲಾ ಶಿಕ್ಷಣ ಕಛೇರಿ, ಒಂದು DIET, ಮತ್ತು ಒಂದು ಜಿಲ್ಲಾ ಕಾರ್ಯಕ್ರಮ ಕಛೇರಿ; ಉಪ-ಜಿಲ್ಲಾ ಮಟ್ಟದಲ್ಲಿನ ಬ್ಲಾಕ್ ಶಿಕ್ಷಣ ಕಛೇರಿ ಮತ್ತು ಬ್ಲಾಕ್ ಸಂಪನ್ಮೂಲ ಕೇಂದ್ರ ಅಥವಾ ಎರಡು ಮಂಡಲ ಸಂಪನ್ಮೂಲ ಕೇಂದ್ರಗಳು; ಹಾಗೂ ಎರಡೂ ರಾಜ್ಯಗಳಲ್ಲಿ ಕೆಲವು ಶಾಲೆಗಳನ್ನು ಮತ್ತು ಗ್ರಾಮಗಳನ್ನು ಒಳಗೊಂಡಿತ್ತು.

ರಾಜ್ಯಮಟ್ಟದ ಕೆಳಗಿರುವ ಹಂತದ ಸಾಂಸ್ಥಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಲು, ಪ್ರತಿಯೊಂದು ರಾಜ್ಯದಲ್ಲಿ ಒಂದು ಜಿಲ್ಲೆಯನ್ನು ಆಯ್ಕೆಮಾಡಿಕೊಳ್ಳಲಾಯಿತು. ಸಾಕ್ಷರತೆ ಮತ್ತು SC/ST ಜನಸಂಖ್ಯೆಯ ಶೇಕಡವಾರು ಪ್ರಮಾಣದಲ್ಲಿ ಒಂದು ರಾಜ್ಯವನ್ನು ಪ್ರತಿನಿಧಿಸುವ ಇದು ಒಂದು 'ಸರಾಸರಿ' ಜಿಲ್ಲೆಯಾಗಿತ್ತು. ರಾಜಸ್ಥಾನದಲ್ಲಿ, ಜಿಲ್ಲೆಯೊಂದರಿಂದ ಒಂದು ಬ್ಲಾಕ್ ಅನ್ನು ಮತ್ತು ಒಂದು ಬ್ಲಾಕ್ ನಲ್ಲಿ ಎರಡು ಸಮೂಹಗಳನ್ನು ಆಯ್ಕೆಮಾಡಲಾಯಿತು. ಆರಿಸಿಕೊಂಡ ಬ್ಲಾಕ್ಗಳು ಜಿಲ್ಲೆಯ 'ಸರಾಸರಿ' ಪ್ರಕಾರದ್ದಾಗಿದ್ದರೆ ಪ್ರಾತಿನಿಧಿಸಿದ್ದ ಸಮೂಹಗಳು ಮಾತ್ರ ಭಿನ್ನವಾಗಿದ್ದವು, ಅಂದರೆ ಹೆಚ್ಚು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದಿರದ ಪ್ರದೇಶಗಳಾಗಿದ್ದವು. ಸಮೂಹಗಳ ಶೈಕ್ಷಣಿಕ ಅಭಿವೃದ್ಧಿ ಮತ್ತು ಮೂಲಸೌಕರ್ಯಗಳ ಲಭ್ಯತೆಯ ಬಗ್ಗೆ ಬ್ಲಾಕ್ ಶಿಕ್ಷಣ ಅಧಿಕಾರಿಗಳ ಗ್ರಹಿಕೆಯ ಆಧಾರದ ಮೇಲೆ ಈ ಸಮೂಹಗಳನ್ನು ಆಯ್ಕೆಮಾಡಲಾಯಿತು. ಆಂಧ್ರ ಪ್ರದೇಶದಲ್ಲಿ, ಜಿಲ್ಲೆಯ ವೈವಿಧ್ಯತೆಯನ್ನು ಪ್ರತಿನಿಧಿಸಲು ಎರಡು ಮಂಡಲಗಳನ್ನು ಆರಿಸಿಕೊಳ್ಳಲಾಯಿತು. (ರೇಖಾಚೌಕ 2.3 ನೋಡಿ).

ಆರಿಸಿಕೊಂಡ ಸಮೂಹ ಮತ್ತು ಮಂಡಲಗಳಲ್ಲಿ ವಿವಿಧ ರೀತಿಯ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು (ರೇಖಾಚೌಕ 2.4). ಪ್ರತಿ ರಾಜ್ಯದಲ್ಲಿ ಮೂರು ವಿಧದ ಆರು ಔಪಚಾರಿಕ

ಶಾಲೆಗಳನ್ನು ಆಯ್ಕೆ ಮಾಡಲಾಯಿತು. ಅವುಗಳೆಂದರೆ, ಹಿರಿಯ ಪ್ರಾಥಮಿಕ ತರಗತಿಗಳನ್ನು ಹೊಂದಿರುವ ಪ್ರೌಢಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು, ಪ್ರಾಥಮಿಕ ಶಾಲೆಗಳು  ಮತ್ತು ಒಂದು ಅನುದಾನರಹಿತ ಖಾಸಗಿ ಶಾಲೆ. ಪರ್ಯಾಯ ಶಿಕ್ಷಣ ಕೇಂದ್ರಗಳಿಗೆ ಸಂಬಂಧಿಸಿದಂತೆ, ರಾಜಸ್ಥಾನದಲ್ಲಿರುವ ಸಮೂಹಗಳು ಮೂರು ರೀತಿಯ ಶಾಲೆಗಳನ್ನು ಹೊಂದಿವೆ: ರಾಜೀವ್ ಗಾಂಧಿ ಪಾಠಶಾಲೆಗಳು, ಶಿಕ್ಷಾಕಾರ್ಮಿ ಶಾಲೆಗಳು, ಮತ್ತು DPEP ಪರ್ಯಾಯ  ಶಾಲೆಗಳು. ಪ್ರತಿ ವಿಧದ ಒಂದೊಂದು ಶಾಲೆಯನ್ನು ಅಧ್ಯಯನಕ್ಕಾಗಿ ಆಯ್ಕೆಮಾಡಲಾಯಿತು. ಆಂಧ್ರ ಪ್ರದೇಶದಲ್ಲಿ ಕೇವಲ ಒಂದು ವಿಧದ ಪರ್ಯಾಯ ಶಾಲೆ ಇದ್ದು ಅದನ್ನು ಅಧ್ಯಯನಕ್ಕೆಂದು ಆಯ್ಕೆಮಾಡಿಕೊಳ್ಳಲಾಯಿತು.

ರಾಜ್ಯ, ಜಿಲ್ಲೆ ಮತ್ತು ಉಪಜಿಲ್ಲಾ ಹಂತದ ಸಂಸ್ಥೆಗಳ ಬಗ್ಗೆ ನಾವು ಮಾಡಿದ ಅಧ್ಯಯನಕ್ಕೆ, ಈ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹಳಷ್ಟು ಸಿಬ್ಬಂದಿವರ್ಗದವರೊಂದಿಗೆ ಮಾಡಿದ ವಿವರವಾದ, ಬಾಗಶಃ ರಚಿತ ಸಂದರ್ಶನಗಳು ನಿರ್ಣಾಯಕ ಸಲಹೆಗಳನ್ನು ಒದಗಿಸಿದವು. ಈ ಸಂದರ್ಶನಗಳು ಸಂದರ್ಶಿಸಲ್ಪಡುತ್ತಿರುವವರ ವೃತ್ತಿ ಅನುಭವ (ಅವರ ತರಬೇತಿ ಸೇರಿದಂತೆ), ಅವರ ನಿಯೋಜನೆ ಮತ್ತು ವರ್ಗಾವಣೆ, ಕೆಲಸದ ಸ್ಥಳದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಸಾಧನೆಗಳು, ಸ್ವಾಯತ್ತತೆ, ಮೇಲ್ವಿಚಾರಣೆ, ಅನುಸರಿಸುತ್ತಿರುವ ನಿರ್ವಹಣಾ ಪರಿಪಾಠಗಳು, ಸಮುದಾಯದೊಂದಿಗಿರುವ ಸಂಬಂಧ, ಸ್ವಯಂಸೇವಾ ಸಂಸ್ಥೆಗಳು ಮತ್ತು ರಾಜಕಾರಣಿಗಳು, ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತಿರುವ ಸಮಸ್ಯೆಗಳ ಬಗ್ಗೆ ಅವರ ಗ್ರಹಿಕೆ  ಮತ್ತು ಅವುಗಳನ್ನು ಪರಿಹರಿಸಲು ಅಳವಡಿಸಕೊಳ್ಳಬಹುದಾದ ಕಾರ್ಯತಂತ್ರಗಳ ಬಗ್ಗೆ ಅವರಿಗಿರುವ ಅಭಿಪ್ರಾಯ, ಶಾಲೆಗಳು ಮತ್ತು ಶಿಕ್ಷಕರ ಕುರಿತಂತೆ ಅಭಿಪ್ರಾಯ, ಪಠ್ಯಪುಸ್ತಕಗಳ ಗ್ರಹಿಕೆ ಮತ್ತು ಅವುಗಳನ್ನು ತಯಾರಿಸುವ ಕುರಿತಂತಿರುವ ಅನುಭವ, ಶಿಕ್ಷಕ ತರಬೇತಿ, ಶಾಲಾ ಪರೀಕ್ಷೆಗಳು, ಅವಕಾಶವಂಚಿತ ಸಮುದಾಯಕ್ಕೆ ಸೇರಿದ ಮಕ್ಕಳ ಬಗ್ಗೆ ಇರುವ ಗ್ರಹಿಕೆ, ಮತ್ತು ಸಂದರ್ಶನದ ಸಮಯದಲ್ಲಿ ಬೆಳಕಿಗೆ ಬಂದ ಇತರ ವಿಚಾರಗಳನ್ನು  ಸಂಶೋಧಿಸಿತು (ಹೆಚ್ಚಿನ ವಿವರಕ್ಕಾಗಿ ರೇಖಾಚೌಕ 2.5  ನೋಡಿ). ಈ ಸಂದರ್ಶನಗಳಿಂದ ದೊರೆತ ಮಾಹಿತಿಯ ಜೊತೆಗೆ ಲಭ್ಯವಿದ್ದ ಕಡತಗಳ, ದಾಖಲೆಗಳ ಅಧ್ಯಯನ ಮತ್ತು ಸಂಬಂಧಪಟ್ಟ ಸಂಸ್ಥೆಗಳ ಪರಿವೀಕ್ಷಣೆ  ಪೂರಕ ಮಾಹಿತಿಯನ್ನು ಒದಗಿಸಿದವು.

ತಳಮಟ್ಟದಲ್ಲಿ, ಗ್ರಾಮದ ಮತ್ತು ಶಾಲೆಯ ಒಂದು ಸಂಪೂರ್ಣವಾದಂತಹ ಚಿತ್ರಣವನ್ನು ತಯಾರಿಸಲಾಯಿತು. ದಾಖಲೆಗಳು ಮತ್ತು ಪ್ರಮುಖ ಮಾಹಿತಿದಾರರ ಸಹಾಯದಿಂದ ಗ್ರಾಮದ ಸಾಮಾಜಿಕ- ಆರ್ಥಿಕ ಸ್ಥಿತಿಯ ಸಂಕ್ಷಿಪ್ತ  ಚಿತ್ರ, ಶೈಕ್ಷಣಿಕ ಸೌಲಭ್ಯಗಳು, ಶಾಲೆಗೆ ಹೋಗುವ

ಅವಕಾಶಗಳು, ಶಾಲೆಗೆ ಹೋಗುವ  ಮತ್ತು ಹೋಗದಿರುವ ಮಕ್ಕಳ ಬಗ್ಗೆ ಸಂಕ್ಷಿಪ್ತ ವಿವರಗಳನ್ನು ಸಂಗ್ರಹಿಸಲಾಯಿತು.

ಟಿಪ್ಪಣಿ

- ಶಾಲೆಯ ಸಾಧನೆಗಳ ಪ್ರಮಾಣ ಮತ್ತು ಶಾಲೆ ಹಾಗೂ ವಿದ್ಯಾರ್ಥಿಗಳ ಆದಾನ ನಡುವಣ ಇರುವ ಸಂಬಂಧಕ್ಕೆ  ಶೈಕ್ಷಣಿಕ ಉತ್ಪಾದನೆ ಎಂದು ಕರೆಯಲಾಗುತ್ತದೆ.